ಈ) ಈ ಬಸ್ ನಿಲ್ದಾಣವು ಪೂರ್ಣಗೊಂಡ ನಂತರ ಇಲ್ಲಿ ಎಷ್ಟು ಬಸ್ಸುಗಳು ನಿಲುಗಡೆಗೆ ಅವಕಾಶವಾಗಲಿದೆ; ಇಲ್ಲಿಗೆ ಬರುವ ಪ್ರಯಾಣಿಕರಿಗೆ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):

ಅ) ಕಟ್ಟಡವು ಲಿಂಟಲ್ ಹಂತಕ್ಕೆ ಬಂದಿರುತ್ತದೆ.

ಆ) ಕಾಮಗಾರಿಯ ಅಂದಾಜು ರೂ. 100.00 ಲಕ್ಷಗಳು.

ಇಲ್ಲಿಯವರೆಗೆ ರೂ. 20.31 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಇ) ಭಾಲ್ಕಿ ಪಟ್ಟಣದಲ್ಲಿ ಈ ಹಿಂದೆ ಇದ್ದ ಬಸ್ ನಿಲ್ದಾಣವು 1.02 ಎಕರೆ ವಿಸ್ತೀರ್ಣದಲ್ಲಿದ್ದು, ಸದರಿ ಸ್ಥಳದಲ್ಲಿ ಹೊಸದಾದ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಲಾಗುತ್ತಿದೆ.

ಇದನ್ನು ವಿಸ್ತರಿಸಲು ಹಳೇ ಬಸ್ ನಿಲ್ದಾಣದ ನಿವೇಶನಕ್ಕೆ ಹೊಂದಿಕೊಂಡಿರುವ ಕೃಷಿ ಇಲಾಖೆಯ 2.00 ಎಕರೆ ಜಮೀನು ಖಾಲಿ ಇದ್ದು, ಸದರಿ ಜಮೀನನ್ನು ಸಂಸ್ಥೆಗೆ ಪಡೆಯಲು ಕ್ರಮ ವಹಿಸುತ್ತಿದ್ದು ಅದನ್ನು ಪಡೆದಲ್ಲಿ ಸದರಿ ಬಸ್ ನಿಲ್ದಾಣವನ್ನು ವಿಸ್ತರಿಸಲು ಕ್ರಮ ವಹಿಸಲಾಗುವುದು.

ಈ) ಈ ಬಸ್ ನಿಲ್ದಾಣ ಪೂರ್ಣಗೊಂಡ ನಂತರ ಏಕಕಾಲದಲ್ಲಿ ಒಟ್ಟು 10 ಬಸ್‌ಗಳ ನಿಲುಗಡೆ ಕಲ್ಪಿಸಬಹುದಾಗಿರುತ್ತದೆ.

ಈ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ, ನಿರೀಕ್ಷಣಾ ಪ್ರಾಂಗಣ, ಆಸನಗಳ ವ್ಯವಸ್ಥೆ, ಬೆಳಕಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಉಪಾಹಾರ ಗೃಹದ ವ್ಯವಸ್ಥೆ, ಮಹಿಳೆಯರಿಗೆ ಪ್ರತ್ಯೇಕ ಕೋಣೆಯ ವ್ಯವಸ್ಥೆ, ಅಂಗವಿಕಲರಿಗೆ ಅವಶ್ಯಕ ರ್‍ಯಾಂಪ್‌ಗಳ ವ್ಯವಸ್ಥೆ, ಧೂಳು ರಹಿತ ಆವರಣಕ್ಕಾಗಿ ಕಾಂಕ್ರೀಟ್ ಆವರಣ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ಹೊಸ ವಿದ್ಯಾರ್ಥಿನಿಲಯಗಳ ಸ್ಥಾಪನೆ

173 (270) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ತಾಲ್ಲೂಕಿನಲ್ಲಿ ಈಗ ಇರುವ ವಿವಿಧ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು;

ಆ) ಈ ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿನಿಲಯಗಳು ಇವೆಯೇ;

ಇ) ಈ ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಇರುವುದರಿಂದ ಈ ತಾಲ್ಲೂಕಿನಲ್ಲಿ ಮತ್ತಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರ ಪರಿಶೀಲಿಸುವುದೇ;

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು):

ಅ)

ಇಲಾಖೆ	ಮೆಟ್ರಿಕ್ ಪೂರ್ವ		ಮೆಟ್ರಿಕ್ ನಂತರ	
	ಬಾಲಕ	ಬಾಲಕಿ	ಬಾಲಕ	ಬಾಲಕಿ
ಸಮಾಜ ಕಲ್ಯಾಣ ಇಲಾಖೆ	07	02	01	01
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	06	02	01	01
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	–	–	–	–
ಒಟ್ಟು	**13**	**04**	**02**	**02**

ಆ) ಮತ್ತು ಇ) ಸಾಮಾನ್ಯವಾಗಿ ಹೆಚ್ಚಿನ ಬೇಡಿಕೆಗಳು ಎಲ್ಲಾ ಕಡೆಯಿಂದ ಬರುತ್ತಿವೆ.

ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಆಯವ್ಯಯದಲ್ಲಿ ಒದಗಿಸಿದ ಅನುದಾನವನ್ನು ಅನುಸರಿಸಿ ಹಂತ ಹಂತವಾಗಿ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

KERCಯವರ ಅಧಿಸೂಚನೆ

174 (271) ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ): ಮತ್ತು ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರೀಕರು ನಿರ್ಮಿಸುವ ವಾಸದ ಮನೆಯ ಆವರಣದ ಒಟ್ಟು ವಿಸ್ತೀರ್ಣ 525 ಚದರ ಮೀಟರ್‌ಗಳಿದ್ದು, ಇಂತಹ ಮನೆಗೆ 12 ಕಿ.ವ್ಯಾ. ವಿದ್ಯುತ್ತಿನ ಪ್ರಮಾಣ ಅಗತ್ಯವಿದ್ದು, ಒಬ್ಬರೇ ಗ್ರಾಹಕರ ಹೆಸರಿನಲ್ಲಿ 4 ಮೀಟರ್‌ಗಳಿದ್ದಲ್ಲಿ ಇಂತಹ ಮನೆಗೆಳಿಗೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳಲು ಗ್ರಾಹಕರು ಕೆ.ಇ.ಆರ್.ಸಿ.ಯವರ ರೆಕವರಿ ಆಫ್